ತಾನು ಅಪ್ರಾಪ್ತ ಎಂಬುದು ನೆನಪಾಗಬೇಕೇ? ಆತ ಇನ್ನೂ ಚಿಕ್ಕವನು, ಬದಲಾಗುವುದಕ್ಕೆ ಸಮಯ ನೀಡಿ ಎನ್ನುವವರಿಗೆ ಗೊತ್ತಿರಲಿ, ಮನಸ್ಸು ಆ ಪರಿ ಕ್ರೂರವಾದ ಮೇಲೆ ಬದಲಾಗುವುದಕ್ಕೆ ಸಾಧ್ಯವೇ ಇಲ್ಲ, ತನ್ನಮ್ಮನನ್ನೋ, ಅಕ್ಕ, ಅಮ್ಮ ಕೊನೆಗೆ ಮಗಳನ್ನೂ ಕಾಮದ ಕಣ್ಣಿಂದಲೇ ನೋಡುವುದಕ್ಕೂ ಹೇಸದ ಇಂಥವರನ್ನು ಬಾಲಾಪರಾಧಿ ಎಂದು ಯಾವ ಬಾಯಿಂದ ಕರೆಯುತ್ತೀರಿ? ಆಕೆಯನ್ನು ಅತ್ಯಾಚಾರ ಮಾಡಿದ್ದಲ್ಲದೆ, ಅಷ್ಟು ಹೊತ್ತಲ್ಲಿ ಲಕ್ಷಣವಾಗಿ ಮನೆಯಲ್ಲಿರುವುದನ್ನು ಬಿಟ್ಟು ರಸ್ತೆಯಲ್ಲಿ ಓಡಾಡುತ್ತಿದ್ದರೆ ಅತ್ಯಾಚಾರ ಮಾಡದೆ ಇನ್ನೇನು ಮಾಡುತ್ತಾರೆ? ತಪ್ಪು ಅವಳದು, ನಮ್ಮದಲ್ಲ'ಎಂಬಂಥ ಮಾತನಾಡುವ ಅಂಥವರು ಎಂದಾದರೂ ಬದಲಾಗುವುದಕ್ಕೆ ಸಾಧ್ಯವೇ?

ಆ ರಕ್ಕಸರಿಗೆ ಕೇವಲ ಗಲ್ಲು ಸಾಕೇ? ರಸ್ತೆಯ ನಡುವಲ್ಲಿ ಅವರನ್ನು ಅರೆಬೆತ್ತಲಾಗಿ ನಿಲ್ಲಿಸಿ ಕಲ್ಲು ಹೊಡೆದು ಸಾಯಿಸುವುದು ಬೇಡವೇ? ಹತ್ತಾರು ಜನರೆದುರು ಅವರಿಗೆ ಚಿತ್ರಹಿಂಸೆ ನೀಡಿ ಹತ್ತು ಜನ್ಮ ಹುಟ್ಟಿಬಂದರೂ ಇಂಥ ಕೆಲಸ ಮಾಡುವ ಮೊದಲು ಭಯವಾಗುವಂಥ ಶಿಕ್ಷೆ ನೀಡುವುದು ಬೇಡವೇ? ಹೆಣ್ಣನ್ನು ಭೋಗದ ವಸ್ತು ಎಂದುಕೊಂಡ ಇಂಥವರನ್ನು ಹೆಣ್ಣು ಮಕ್ಕಳೇ ಹೊಡೆದು ಸಾಯಿಸಿ, ಇನ್ನೊಬ್ಬ ಇಂಥ ಕೆಲಸ ಮಾಡುವ ಮೊದಲು ಯೋಚಿಸುವಂತೆ ಮಾಡುವುದು ಬೇಡವೇ? ಕೊಂಚ ಅತ್ಯಾಚಾರದ ವಿಷಯದಲ್ಲಿ ನಮ್ಮ ಕಾನೂನು ಬದಲಾಗುವುದು ಬೇಡವೇ?

ನಿಜ,ಮೇ 5,2017 ರಂದು ನಿರ್ಭಯಾ (ಜ್ಯೋತಿ ಸಿಂಗ್)ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಆ ನಾಲ್ಕು ಜನ ಅಮಾನವೀಯರಿಗೆ ಗಲ್ಲುಶಿಕ್ಷೆಯನ್ನು ಘೋಷಿಸುತ್ತಿದ್ದಂತೆಯೇ ನ್ಯಾಯಾಂಗ ವ್ಯವಸ್ಥೆಯ ಬಗ್ಗೆ ಹೆಮ್ಮೆ ಎನ್ನಿಸಿದ್ದು ಸತ್ಯ. ಡಿಸೆಂಬರ್ 16,2012ರ ರಾತ್ರಿ ಇಡೀ ದೇಶದ ನೈತಿಕ ಸ್ಥೈರ್ಯವನ್ನೇ ಬುಡಮೇಲು ಮಾಡಿದ್ದ ಆ ಘಟನೆ ನಡೆದ ನಾಲ್ಕೂವರೆಗೆ ವರ್ಷದ ಮೇಲೆ ನಾಲ್ವರು ಆರೋಪಿಗಳಿಗೆ ಗಲ್ಲುಶಿಕ್ಷೆ ವಿಧಿಸಿದ ದೀಪಕ್ ಮಿಶ್ರಾ ನೇತೃತ್ವದ ಸುಪ್ರೀಂ ಕೋರ್ಟ್ ತ್ರಿಸದಸ್ಯ ಪೀಠದ ತೀರ್ಪು ಐತಿಹಾಸಿಕವೆನ್ನಿಸಿತ್ತು. ನಿರ್ಭಯಾ ಪ್ರಕರಣ ಬೇರೆಲ್ಲ ಅತ್ಯಾಚಾರ ಪ್ರಕರಣಕ್ಕಿಂತ ಹೆಚ್ಚು ಸುದ್ದಿಯಾಗುವುದಕ್ಕೆ ಕಾರಣ ಬಹುಶಃ ಆಕೆ ಅನುಭವಿಸಿದ ಕ್ರೂರಾತಿ ಕ್ರೂರ ಹಿಂಸೆ. ಅದಕ್ಕೆಂದೇ ಆ ಆರೋಪಿಗಳನ್ನು ಘಟನೆ ನಡೆದ ನಾಲ್ಕೈದು ದಿನದೊಳಗೇ ಬಂಧಿಸುವಷ್ಟು ಒತ್ತಡವನ್ನು ಮಾಧ್ಯಮಗಳೂ ಹೇರಿದ್ದವು.

ಅಷ್ಟೇ ಅಲ್ಲ,ಘಟನೆ ನಡೆದ ದಿನದಿಂದ ಹಿಡಿದು ನಿರ್ಭಯಾ ಸಿಂಗಾಪುರದ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದ ದಿನದವರೆಗೂ ಅಂದರೆ ಡಿಸೆಂಬರ್ 29 , 2012ರವರೆಗೂ ಆಕೆಗಾಗಿ ಇಡೀ ದೇಶವೂ ಪ್ರಾರ್ಥಿಸಿತ್ತು.ಆಕೆ ಸತ್ತ ನಂತರವಂತೂ ಆ ಘಟನೆ ಕೇವಲ ದೆಹಲಿಗಷ್ಟೇ ಸೀಮಿತ ಎಂಬಂತೆ ನೋಡದೆ, ಇಡೀ ದೇಶದ ಜನರೂ ಅತ್ಯಾಚಾರದ ವಿರುದ್ಧ ದನಿ ಎತ್ತುವುದಕ್ಕೆ ಆರಂಭಿಸಿದರು. ಆಕೆ ಸತ್ತಳು, ಆದರೆ ಆಕೆಯ ಹೆಸರಲ್ಲಿ ಅತ್ಯಾಚಾರ ವಿರೋಧಿ ಕಾಯಿದೆಯೇ ಬಂತು! ಅತ್ಯಾಚಾರ ಪ್ರಕರಣಗಳ ಶೀಘ್ರ ವಿಚಾರಣೆಗಾಗಿ ತ್ವರಿತ ನ್ಯಾಯಾಲಯಗಳು ಆರಂಭವಾದವು. ಅತ್ಯಾಚಾರಿಗಳಿಗೆ ಗಲ್ಲುಶಿಕ್ಷೆ ನೀಡುವ ಕುರಿತೂ ಚರ್ಚೆ ಎದ್ದಿತ್ತು. ಅತ್ಯಾಚಾರದಂಥ ಹೀನ ಕೃತ್ಯದಲ್ಲಿ ಪಾಲ್ಗೊಳ್ಳುವ 18 ವರ್ಷದೊಳಗಿನ ಬಾಲಾಪರಾಧಿಗಳಿಗೂ ವಯಸ್ಕ ಅಪರಾಧಿಗಳಿಗೆ ನೀಡುವಷ್ಟೇ ಘೋರ ಶಿಕ್ಷೆ ನೀಡಬೇಕೆಂಬ ಕಾನೂನೂ ಬಂತು. ಆದರೆ ಆಕೆಯ ದುರದೃಷ್ಟಕ್ಕೆ ಆಕೆಗೆ ಕ್ರೂರ ಹಿಂಸೆ ನೀಡಿದ್ದ ಬಾಲಾಪರಾಧಿಯನ್ನು ಮೂರು ವರ್ಷದ ಶಿಕ್ಷೆಯ ನಂತರ ಜೈಲಿನಿಂದ ಬಿಡುಗಡೆ ಮಾಡಿದ ನಂತರ ಈ ಕಾನೂನು ಜಾರಿಗೆ ಬಂತು!

ಒಬ್ಬ ಮುಗ್ಧ ಹುಡುಗಿಯ ಇಂಥ ದುರಂತ ಸಾವು, ದೇಶದ ಶಿಕ್ಷಣ ವ್ಯವಸ್ಥೆಯನ್ನೂ, ಮಕ್ಕಳಿಗೆ ಸಿಗುವ ಸಂಸ್ಕಾರದ ಗುಣಮಟ್ಟವನ್ನು ಆತ್ಮಾವಲೋಕನಕ್ಕೆ ಹಚ್ಚುವಂತೆ ಮಾಡಿತ್ತು. ನೈತಿಕತೆಯನ್ನು ಅಗ್ಗದ ಬೆಲೆಗೆ ಬಿಕರಿಗಿಟ್ಟ ಹೊಸ ತಲೆಮಾರಿನ ಮಕ್ಕಳ, ಯುವಕರ ಮನಸ್ಥಿತಿಯನ್ನು ಬದಲಿಸುವುದು ಹೇಗೆ ಎಂಬ ಕುರಿತು ಸರ್ಕಾರ ತಲೆಮೇಲೆ ಕೈಹೊತ್ತು ಚಿಂತಿಸುವಂತೆ ಮಾಡುವಲ್ಲಿ ಈ ಪ್ರಕರಣದ ಪಾತ್ರ ಅಪಾರ.



ಈ ಪ್ರಕರಣಕ್ಕೆ ಮಾಧ್ಯಮಗಳೂ ಅದೆಷ್ಟು ಆಸಕ್ತಿ ತೋರಿದವು ಎಂದರೆ ಮೊನ್ನೆ ಆರೋಪಿಗಳಿಗೆ ಸಿಕ್ಕ ಗಲ್ಲುಶಿಕ್ಷೆಯಲ್ಲಿ ಮಾಧ್ಯಮಗಳ ಕೊಡುಗೆ ಅಪಾರವಾಗಿರುವುದು ಸುಳ್ಳಲ್ಲ. ಪ್ರಜಾಪ್ರಭುತ್ವದ ನಾಲ್ಕನೇ ಸ್ತಂಭದ ಜವಾಬ್ದಾರಿಯನ್ನು ಅರಿತು, ಎಲ್ಲೂ ಎಡವದೆ ಈ ಪ್ರಕರಣದಲ್ಲಿ ನಿರ್ಭಯಾ ಕುಟುಂಬಕ್ಕೆ ನ್ಯಾಯ ದೊರಕಿಸಿಕೊಡುವಲ್ಲಿ ಶ್ರಮಿಸಿದ್ದು ನಿಸ್ಸಂದೇಹವಾಗಿ ಮಾಧ್ಯಮ. ಕೇವಲ ನಿರ್ಭಯಾ ಪ್ರಕರಣದಲ್ಲಿ ಮಾತ್ರವಲ್ಲದೆ ಪ್ರತಿಯೊಂದು ಅತ್ಯಾಚಾರ ಪ್ರಕರಣದಲ್ಲೂ ಮಾಧ್ಯಮಗಳು ಇಂಥದೇ ಆಸಕ್ತಿ ತೋರಿ, ತಮ್ಮ ಪಾತ್ರವನ್ನು ನಿಭಾಯಿಸಿದ್ದೇ ಆದರೆ ಮಾಧ್ಯಮ ಕ್ಷೇತ್ರದ ಕುರಿತು ಈಗಾಗಲೇ ಜನರಿಗಿರುವ ಋಣಾತ್ಮಕ ಭಾವ ಬದಲಾಗಬಹುದು.

ಶಿಕ್ಷೆಯ ಭಯ ಅಪರಾಧವನ್ನು ನಿಯಂತ್ರಿಸುವುದು ನಿಜ. ಆದ್ದರಿಂದಲೇ ಇಂಥ ಅಮಾನವೀಯ ಕೃತ್ಯಗಳಿಗೆ ಭಯಾನಕ ಶಿಕ್ಷೆ ನೀಡಲೇಬೇಕು. ಒಂದಿಬ್ಬರಿಗೆ ನೀಡಿದ ಇಂಥ ಶಿಕ್ಷೆ ನೂರಾರು ಜನರ ಮನಸ್ಸನ್ನು ಬದಲಿಸುತ್ತಾದರೆ ಅಂಥ ಶಿಕ್ಷೆಯನ್ನು ನೀಡಿದರೆ ತಪ್ಪೇನು? ಅದಕ್ಕೆಂದೇ ಅತ್ಯಾಚಾರದಂಥ ಕ್ರೂರ ಕೃತ್ಯಮಾಡಿದವರನ್ನು ನಿರ್ದಯವಾಗಿ ಶಿಕ್ಷಿಸುವಂಥ ಕಠಿಣ ಕಾನೂನಿನ ಅಗತ್ಯವೂ ಭಾರತಕ್ಕಿದೆ. ಹೊಸ ತಲೆಮಾರು ಮೊಳಕೆಯಲ್ಲಿದ್ದಾಗಲೇ ಅದಕ್ಕೆ ಉತ್ತಮ ಸಂಸ್ಕಾರ ನೀಡುವುದು, ಉತ್ತಮ ಸಂಸ್ಕಾರ ಸಿಗದೆ ವಿಕೃತ ಕೆಲಸಗಳಲ್ಲಿ ಕೈಗೊಂಡರೆ ಅಂಥವರಿಗೆ ಉಗ್ರ ಶಿಕ್ಷೆ ನೀಡುವುದು ಈ ಎರಡರಿಂದ ಮಾತ್ರವೇ ಸಮಾಜದ ಬದಲಾವಣೆ ಸಾಧ್ಯ ಅಲ್ಲವೇ?

ಏನೇ ಆಗಲಿ, ನಿರ್ಭಯಾ ಪ್ರಕರಣದಲ್ಲಿ ಆ ಬಾಲಾಪರಾಧಿಗೂ ಉಗ್ರ ಶಿಕ್ಷೆಯಾಗಲಿ, ಅತ್ಯಾಚಾರಿಗಳಿಗೆಲ್ಲ ಕಾನೂನು ಇಂಥ ನಿರ್ದಯ ಶಿಕ್ಷೆಯನ್ನೇ ನೀಡಲಿ. ಈ ಮೂಲಕವಾದರೂ ನಮ್ಮಲ್ಲಿ ಅಪರಾಧ, ಅತ್ಯಾಚಾರ ಪ್ರಕರಣಗಳು ಕಡಿಮೆಯಾಗಲಿ.